# ರಾಗಿ ತಂದೀರಾ ಭಿಕ್ಷಕೆ ರಾಗಿ ತಂದೀರಾ

1. **Ref.:** Shri Purandara Dasara Sahitya Part – 6, Sankeerna Sangraha, edited by Shri Betageri Krishna Sharma and Shri Bengeri Huchha Rayaru, page No. 85.
2. **Ref.:** Purandara Sahitya Darshana, Samputa 1, Jeevana Darshana edited by Prof. S.K. Ramachandra Rao, page No. 136.
3. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 498. The lyrics here are almost matching Ref. 2. Few differences are there in wordings but are not considered here and marked here.
4. **Note:** The wordings are similar in Ref. 1 & Ref. 2 above. But there are additional stanzas (stanza 4 & 5) in the book in Ref. 2 above. They are marked in yellow highlights.
5. Note: The wordings which are slightly different in the book in Ref. 1 above are marked in green highlights.

ರಾಗ ನಾದನಾಮಕ್ರಿಯೆ ತಾಳ ಛಾಪು

ರಾಗಿ ತಂದೀರಾ ಭಿಕ್ಷಕೆ ರಾಗಿ ತಂದೀರಾ
ಯೋಗ್ಯರಾಗಿ ಭೋಗ್ಯರಾಗಿ ಭಾಗ್ಯವಂತರಾಗಿ ನೀವು ॥ ಪ ॥

ಅನ್ನದಾನವ ಮಾಡುವರಾಗಿ
ಅನ್ನ ಛತ್ರವನ್ನಿಟ್ಟವರಾಗಿ
ಅನ್ಯ (ವಾರ್ತೆಯ) (ವಾರ್ತೆಗಳ) ಬಿಟ್ಟವರಾಗಿ
ಅನುದಿನ ಭಜನೆಯ ಮಾಡುವರಾಗಿ ॥ 1 ॥

(ಮಾತಾಪಿತರನು) (ಮಾತಾ ಪಿತೃಗಳ) ಸೇವಿಪರಾಗಿ
ಪಾಪ ಕಾರ್ಯವ ಬಿಟ್ಟವರಾಗಿ
(ಖ್ಯಾತಿಯಲ್ಲಿ) (ಜಾತಿಯಲಿ) ಮಿಗಿಲಾದವರಾಗಿ
ನೀತಿ ಮಾರ್ಗದಲಿ ಖ್ಯಾತರಾಗಿ ॥ 2 ॥

ಗುರು ಕಾರುಣ್ಯವ ಪಡೆದವರಾಗಿ
ಗುರುವಿನ ಮರ್ಮವ ತಿಳಿದವರಾಗಿ
ಗುರುವಿನ ಪಾದವ ಸ್ಮರಿಸುವರಾಗಿ
ಪರಮ ಪುಣ್ಯವನು ಮಾಡುವರಾಗಿ || 3 ||

ಶ್ರೀನಿವಾಸನ ಸ್ಮರಿಸುವರಾಗಿ
ಪ್ರಾಣ ರಾಯನ ದಾಸರಾಗಿ
ದಾನಕೆಂದು ಬಲು ಹೆದರಿ ಇಂಥ
ದೀನ ವೃತ್ತಿಯಲಿ ಹೀನರಾಗಿ || 4 ||

ಪಕ್ಷ ಮಾಸ ವ್ರತ ಮಾಡುವರಾಗಿ
ಪಕ್ಷಿ ವಾಹನಗೆ ಪ್ರಿಯರಾಗಿ
ಕುಕ್ಷಿಲಿ ಕಲ್ಮಷ ಇಲ್ಲದವರಾಗಿ
ಭಿಕ್ಷುಕರು ಅತಿ ತುಚ್ಛರಾಗಿ || 5 ||

ವೇದ ಪುರಾಣವ ತಿಳಿದವರಾಗಿ
ಮೇದಿನಿಯಾಳುವಂಥವರಾಗಿ
ಸಾಧು ಧರ್ಮವಾಚರಿಸುವರಾಗಿ
ಓದಿ ಗ್ರಂಥಗಳ ಪಂಡಿತರಾಗಿ || 6 ||

(ಆರರ) (ಆರು) ಮಾರ್ಗವ ಅರಿತವರಾಗಿ
(ಮೂರರ) (ಮೂರು) ಮಾರ್ಗವ ತಿಳಿದವರಾಗಿ
ಭೂರಿ ತತ್ತ್ವವನು ಬೆರೆತವರಾಗಿ
ಕ್ರೂರರ ಸಂಗವ ಬಿಟ್ಟವರಾಗಿ || 7 ||

ಕಾಮ ಕ್ರೋಧವ ಅಳಿದವರಾಗಿ
ನೇಮ ನಿಷ್ಠೆಗಳ ಮಾಡುವರಾಗಿ
ಆ ಮಹಾ ಪದವಿಲಿ ಸುಖಿಸುವರಾಗಿ
ಪ್ರೇಮದಿ ಕುಣಿ ಕುಣಿದಾಡುವರಾಗಿ || 8 ||

ಸಿರಿ ರಮಣನ ಸದಾ ಸ್ಮರಿಸುವರಾಗಿ
(ಗುರುತಿಗೆ ಬಾಹೋರಂಥವರಾಗಿ) (ಕುರುಹಿಗೆ ಬಾಗುವಂತವರಾಗಿ)

ಕರೆಕರೆ ಸಂಸಾರ ನೀಗುವರಾಗಿ
ಪುರಂದರ ವಿಠಲನ ಸೇವಿಪರಾಗಿ ॥ 9 ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ದಾಸರು ಉಪಾದಾನಕ್ಕೆ ಬಂದಾಗ ಒಂದು ಮನೆಯಲ್ಲಿ ಅಕ್ಕಿಗೆ ಬದಲು ರಾಗಿ ದೊರಕಿತು. 'ರಾಗಿ' ಎಂಬ ಮಾತನ್ನೇ ಹಿಡಿದು ಅವರ ಸುತ್ತ ಹೆಣೆದಿರುವ ಜಾಣ ತನದ ಪದ ಇದು.

**ಅನ್ಯ ವಾರ್ತೆಯ** – ಹರಿಕೀರ್ತನೆಯನ್ನು ಬಿಟ್ಟು ಬೇರೆ ಮಾತನ್ನು ಬಿಡಿ; ಬೇರೆಯವರ ಸುದ್ದಿಯನ್ನು ತಲೆಗೆ ಹಚ್ಚಿಕೊಳ್ಳದಿರಿ.

**ಅನುದಿನ** – ಪ್ರತಿನಿತ್ಯ.

**ಪ್ರಾಣ ರಾಯನ ದಾಸರಾಗಿ** – ಹನುಮಂತನ ಭಕ್ತರಾಗಿ; ಹನುಮಂತನ ಅವತಾರವಾದ ಮಧ್ವಾಚಾರ್ಯರ ಸಿದ್ಧಾಂತವನ್ನು ನಂಬಿ ನಡೆಯುವವರಾಗಿ.

**ದಾನಕೆಂದು...** – ದಾನಮಾಡಿದರೆ ಧನ ಕಡಮೆಯಾಗುವುದೆಂದು ಹೆದರಿ ದಾನ ಮಾಡದಿರುವುದೇ ಇಲ್ಲಿ ದೀನವೃತ್ತಿ; ಇದರಲ್ಲಿ ಹೀನರೆಂದರೆ ಇದನ್ನು ಬಿಟ್ಟವರು; ಉದಾರಿಗಳು.

**ಕುಕ್ಷಿಲಿ ಕಲ್ಮಷ** – ಹೊಟ್ಟೆಯಲ್ಲಿ ಕೊಳೆ; ಸಿಟ್ಟು, ಅಸೂಯೆ, ಬಯಕೆ ಮೊದಲಾದವು.

**ಮೇದಿನಿಯಾಳುವಂಥವರಾಗಿ** – ಭೂಮಿಯ ಮೇಲೆ ಒಡೆತನ ಮಾಡುವವರಾಗಿ: ಪ್ರಾಪಂಚಿಕ ಸುಖಗಳಿಗೆ ವಶರಾಗದೆ ಅವನ್ನು ಮೀರಿ ನಿಂತವರಾಗಿ.

**ಆರು ಮಾರ್ಗವ** – ಷಡಂಗಯೋಗ; ಯೋಗಾಭ್ಯಾಸದಲ್ಲಿ ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣಾ, ಧ್ಯಾನ, ಸಮಾಧಿ ಇವು ಆರು ಅಂಗಗಳು.

**ಮೂರು ಮಾರ್ಗವ** – ವೇದಾಂತದ ಶ್ರವಣ, ಮನನ, ನಿದಿಧ್ಯಾಸನ ಎಂಬ ಮೂರು ಸಾಧನೋಪಾಯಗಳು.

**ಭೂರಿ ತತ್ತ್ವವ** – ಹಿರಿಯ ತತ್ತ್ವವೆಂದರೆ ಭಗವತ್ತತ್ತ್ವ; ಅದಕ್ಕಿಂತ ದೊಡ್ಡದಿಲ್ಲವಾದುದರಿಂದ ಅದೇ 'ಭೂರಿ' ಅಥವಾ 'ಭೂಮಾ'

**ಗುರುತಿಗೆ ಬಾಹೋರಂಥವರಾಗಿ** – ಜೀವವು ತನ್ನ ದಿಟವಾದ ಸ್ವರೂಪವನ್ನು ಅರಿತುಕೊಳ್ಳುವುದು, ಗುರುತಿಸಿಕೊಳ್ಳುವುದು 'ಸ್ವಸ್ವರೂಪಜ್ಞಾನ'ವೆಂಬ ಸಾಧನೆಯ ಘಟ್ಟ. ಇದಕ್ಕೆ ಪಾರಿಭಾಷಿಕವಾಗಿ 'ಪ್ರತ್ಯಭಿಜ್ಞಾನ'ವೆಂಬ ಹೆಸರೂ ಇದೆ.

**ಕರೆಕರೆ ಸಂಸಾರ** – ಕಟಪಟಿಯ ಸಂಸಾರ; ದುಃಖ, ದುಗುಡ, ದುಮ್ಮಾನಗಳನ್ನು ಮತ್ತೆ ಮತ್ತೆ ಒದಗಿಸುವ ಸಂಸಾರ.

**Classification:** Mundige
**Ankita:** purandara vittala
**Location:** NA
**Category:** Jeevanoddhara, Mundige
**Group Words:** Ragi, bhikshe, Bhagya, anna, dana, bhajane, tayi, tande, papa, karuna, punya, srinivasa, prana, pakshi, vrata, veda, purana, sadhu, dharma, tatva, sittu, sukha, smarane, samsara,
**Pravachana:** Vid. Kallapur Pavamanachar
**Explanation:** NA